ನಡೆಯುವುದು, ಓಡುವುದು, ಹೊಟ್ಟೆಪಾಡಿಗಾಗಿ ಯಾವುದಾರೊಂದು ಚಾಕರಿಯನ್ನು ಮಾಡುವುದು, ಮನೆ–ಮಕ್ಕಳು–ಕುಟುಂಬ, ನಗು–ಅಳು, ಹುಟ್ಟು–ಸಾವು – ಇವೇ ತಾನೆ ನಮ್ಮ ಜೀವನ? ಇದನ್ನೇ ಒಟ್ಟಾಗಿ 'ಸಂಸಾರ' ಎನ್ನಲಾಗುತ್ತದೆ. ಇವಿಲ್ಲದಿರುವುದು, ಇವಕ್ಕೂ ಮಿಗಿಲಾದದ್ದು ನಿರ್ವಾಣ, ಮೋಕ್ಷ, ಬುದ್ಧತ್ವ ಎಂಬ ನಂಬಿಕೆ ಚಲಾವಣೆಯಲ್ಲಿದೆ. ಸಂಸಾರಕ್ಕೆ ವಿರುದ್ಧವಾದದ್ದು ಮೋಕ್ಷ ಎನ್ನುವುದು ಇದರ ತಾತ್ಪರ್ಯ. ಆದರೆ ಇಲ್ಲಿ ಜೋಷು ಈ ಸಿದ್ಧಾಂತವನ್ನು ನಿರಾಕರಿಸುತ್ತಿದ್ದಾನೆ. ಊಟ ಮಾಡುವುದು ಒಂದು ಸಾಮಾನ್ಯವಾದ ಸಂಗತಿ; ಊಟವೇ ಸಾಮಾನ್ಯವಾದ ಸಂಗತಿಯಾದಮೇಲೆ ಇನ್ನು ಊಟದ ತಟ್ಟೆಯನ್ನು ತೊಳೆಯುವುದು ಕ್ಷುಲ್ಲಕವಾದ ಸಂಗತಿಯಲ್ಲವೆ? ಇದು ನಮ್ಮ ಗ್ರಹಿಕೆ; ಸಿದ್ಧಾಂತ. ಆದರೆ ಝೆನ್‌ದರ್ಶನದ ಪ್ರಕಾರ ಈ 'ಸಾಮಾನ್ಯ' ಸಂಗತಿಗಳಿಗೂ ಅಧ್ಯಾತ್ಮದ 'ಅಸಾಮಾನ್ಯ' ಸಂಗತಿಗಳಿಗೂ ವ್ಯತ್ಯಾಸವೇನೂ ಇರದು. ಝೆನ್‌ತತ್ತ್ವವನ್ನು ಬೋಧಿಸಿ ಎಂದು ಕೇಳಿದ ಭಿಕ್ಷುವಿಗೆ ಜೋಷು ಬೋಧಿಸಿದ್ದೇನು? 'ಊಟ ಆಯಿತೆ? ಎಂದು ಕೇಳಿದ್ದು. ಊಟ ಮಾಡುವುದುಕ್ಕೂ ಝೆನ್‌ಗೂ ಏನೂ ವ್ಯತ್ಯಾಸ ಇಲ್ಲ. ಸರಿ, ಆಮೇಲೆ? ಊಟ ಮಾಡಿದ ಬಳಿಕ ಮಾಡಬೇಕಾದ್ದೇನು? ಊಟದ ತಟ್ಟೆಯನ್ನು ತೊಳೆಯಬೇಕು ತಾನೆ? ಅದನ್ನು ಮಾಡು ಎಂದು – ಜೋಷು ಹೇಳಿದ್ದು. ನಾವು ಮಾಡುವ ಕೆಲಸಕ್ಕೂ ಅಧ್ಯಾತ್ಮದ ಸಾಧನೆಗೂ ವ್ಯತ್ಯಾಸವೇನೂ ಇಲ್ಲ; ಮಾಡುವ ಪ್ರತಿಯೊಂದು ಕೆಲಸವೂ ಅಧ್ಯಾತ್ಮದ ಸಾಧನೆಯೇ ಹೌದು; ಆದರೆ ಅದನ್ನು ಸಾಧನೆಯಂತೆ ಸ್ವೀಕರಿಸಿ ಶ್ರದ್ಧೆಯಿಂದ ಮಾಡಬೇಕಷ್ಟೆ. ಸಾಮಾನ್ಯವಾಗಿ ಬಳಕೆಯಲ್ಲಿರುವ 'ಕಾಯಕವೇ ಕೈಲಾಸ' ಎಂಬ ಮಾತಿನ ಧ್ವನಿಯಾದರೂ ಇದೇ. ಅಧ್ಯಾತ್ಮದ ಸಾಧನೆಗೆ ನಾವು ಎಲ್ಲೋ ದೂರದ ಪ್ರದೇಶಕ್ಕೆ ಹೋಗಿ, ಒಂಟಿಯಾಗಿ ಒಂಟಿಕಾಲಿನಲ್ಲಿ ನಿಂತು ಮಾಡುವ ತಪಸ್ಸೇ ಆಗಬೇಕಿಲ್ಲ; ಸಂಸಾರದಲ್ಲಿದ್ದೂ ನಮ್ಮ ಕರ್ತವ್ಯಗಳನ್ನು ನಾವು ಸರಿಯಾಗಿ ಮಾಡುತ್ತಿದ್ದರೆ ಅದೇ ಅಧ್ಯಾತ್ಮ. ಹೀಗೆ ನಮ್ಮ ನಿತ್ಯದ ಬದುಕಿನ ದಿಟವಾದ ಮೌಲ್ಯವನ್ನು ತಿಳಿದುಕೊಳ್ಳುವುದೇ ವಿವೇಕ. ಈ ಅರಿವೇ ಜ್ಞಾನೋದಯ.

'ಈ ಕೆಲಸ ಕನಿಷ್ಠವಾದದ್ದು', 'ಆ ಕೆಲಸ ಶ್ರೇಷ್ಠವಾದದ್ದು' – ಎಂಬ ರೀತಿಯಲ್ಲಿಯೇ ನಮ್ಮ ಮನಸ್ಸು ಕೆಲಸ ಮಾಡುತ್ತಿರುತ್ತದೆ. ಇಂಥ ಲೆಕ್ಕಾಚಾರದ ಮನಸ್ಸೇ ಇರುವ ಸಂತೋಷವನ್ನು ಬಿಟ್ಟು ಇಲ್ಲದ ಸಂತೋಷವನ್ನು ಕಾಣದ ತಾಣದಲ್ಲಿ ಹುಡುಕಲು ಹೊರಡುವುದು. ಶಿಷ್ಯನಲ್ಲಿದ್ದ ಅಂಥ ಪೂರ್ವಗ್ರಹದ ಮನಸ್ಸನ್ನು, ಸಂಕುಚಿತ ಬುದ್ಧಿಯನ್ನು, ಅವಿವೇಕದ ದಾರಿಯನ್ನು ಜೋಷು ಕತ್ತರಿಸಿ ಹಾಕಿದ. ಆ ಕೂಡಲೇ ಅವನಿಗೆ ಜ್ಞಾನೋದಯವಾಯಿತು. ಪೂರ್ವಗ್ರಹಗಳ ಮೂಟೆಯ ಹೊರೆ ನಮ್ಮ ಭಾವ–ಬುದ್ಧಿಗಳಿಂದ ಇಳಿಸಿದರೆ ಆಗ ಒದಗುವ ಸುಖವೇ ಬುದ್ಧತ್ವ; ಅದು ಎಲ್ಲೆಲ್ಲೂ ಇರುವ ತತ್ತ್ವವಾದದ್ದರಿಂದ ಅದು ಎಲ್ಲ ಕೆಲಸದಲ್ಲೂ ಗೋಚರವಾಗಲೇ ಬೇಕು. ಅದಕ್ಕೆ ಆವಶ್ಯಕವಾದ ನಮ್ಮ ದೃಷ್ಟಿ ವಿಶಾಲವಾಗಿರಬೇಕಷ್ಟೆ! ನಾವು ಯಾವುದೇ ಕೆಲಸವನ್ನು ಮಾಡಬಹುದು; ಆ ಕೆಲಸಕ್ಕೆ ಮೌಲ್ಯ ಒದಗುವುದು ಅದನ್ನು ನಾವು ಹೇಗೆ ಮಾಡುತ್ತೇವೆ ಎನ್ನುವುದರಿಂದಲೇ ಹೊರತು ಆ ಕೆಲಸದಲ್ಲಿಯೇ 'ಇದಕ್ಕೆ ಇಷ್ಟು ಬೆಲೆ' ಎಂಬ ಘೋಷಣೆ ಇರದು. ಮಾಡುವ ಕೆಲಸವೇ ಪೂಜೆಯೂ ಆಗಬಹುದು, ಸಜೆಯೂ ಎನಿಸಬಹುದು. ಈ ಸಂವೇದನೆ–ಅನುಭೂತಿಗಳು ನಮ್ಮ ಅಂತರಂಗದ ಪಾಕವನ್ನು ಅವಲಂಬಿಸಿರುತ್ತವೆಯೆನ್ನಿ! ನಮ್ಮ ಶರೀರವೇ ಬುದ್ಧನ ಶರೀರ; ಈ ಜಗತ್ತೇ ಬುದ್ಧಜಗತ್ತು.